# ಸಜ್ಜನರಿಂದ ದುರ್ಜನ ಸಂಹಾರ

## ಹೈದ್ರಾಬಾದ್ ಪಶುವೈದ್ಯೆಯ ರೇಪಿಸ್ಟ್, ಹಂತಕರ ಎನ್‌ಕೌಂಟರ್ | ಸಂತ್ರಸ್ತೆ ಕುಟುಂಬ ನಿಟ್ಟುಸಿರು

## ಕನ್ನಡಿಗ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ಕಾರ್ಯಾಚರಣೆ | ಖಾಕಿ ಪಡೆಗೆ ಭಾರತ ಅಭಿನಂದನೆ

ಹೈದರಾಬಾದ್: ದೆಹಲಿಯ ನಿರ್ಭಯಾ ಅತ್ಯಾಚಾರ ಪ್ರಕರಣದ ಬಳಿಕ ಭಾರತವನ್ನು ಆಕ್ರೋಶ ಮತ್ತು ವಿಷಾದದಲ್ಲಿ ಮುಳುಗಿಸಿರುವ ಹೈದರಾಬಾದ್ ಪಶುವೈದ್ಯೆ ಅತ್ಯಾಚಾರ, ಹತ್ಯೆ ಪ್ರಕರಣದ ನಾಲ್ವರೂ ಆರೋಪಿಗಳನ್ನು ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಒಂಟಿ ಯುವತಿಯನ್ನು ಹೊತ್ತೊಯ್ದು ಮೃಗೀಯವಾಗಿ ಅತ್ಯಾಚಾರಗೈದು ಬೆಂಕಿ ಇಟ್ಟು ಕೊಂದಿದ್ದ ಈ ಕಾಮಪಿಶಾಚಿಗಳನ್ನು ಕೃತ್ಯವೆಸಗಿದ ಸ್ಥಳದಲ್ಲೇ ತೆಲಂಗಾಣ ಪೊಲೀಸರು ಶುಕ್ರವಾರ ಬೆಳಗಿನ ಜಾವ ಹೊಡೆದುರುಳಿಸಿದ್ದಾರೆ. ಸ್ಥಳ ಮಹಜರಿಗಾಗಿ ಕೊಂಡೊಯ್ದ ವೇಳೆ ಆರೋಪಿಗಳು ಪೊಲೀಸರ ಬಂದೂಕು ಕಸಿದು ಹಲ್ಲೆಗೆ ಮುಂದಾದಾಗ ಕನ್ನಡಿಗ, ಸೈಬರಾಬಾದ್ ಪೊಲೀಸ್ ಆಯುಕ್ತ ವಿಶ್ವನಾಥ ಸಜ್ಜನರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು. ಪೊಲೀಸರ ಈ ಕಾರ್ಯಕ್ಕೆ ದೇಶದೆಲ್ಲೆಡೆ ಶ್ಲಾಘನೆ ವ್ಯಕ್ತವಾಗುತ್ತಿದ್ದರೆ, ಇದು ನಕಲಿ ಎನ್‌ಕೌಂಟರ್ ಎಂಬ ಆರೋಪ ಕೂಡ ಕೇಳಿಬಂದಿದೆ.

ಏನಾಯ್ತು?: ಶುಕ್ರವಾರ ಬೆಳಗಿನ ಜಾವ ಕೇಂದ್ರ ಕಾರಾಗೃಹದಲ್ಲಿದ್ದ ಆರೋಪಿಗಳನ್ನು ಮಹಜರಿಗಾಗಿ ಹತ್ಯೆ ನಡೆದಿದ್ದ ಸ್ಥಳಕ್ಕೆ ಪೊಲೀಸರು ಕರೆದೊಯ್ದಿದ್ದರು. 5.45ರ ವೇಳೆಗೆ ಪೊಲೀಸರ ಮೇಲೆ ಮುಗಿಬಿದ್ದ ಪ್ರಕರಣದ ಮೊದಲ ಆರೋಪಿ ಮಹ್ಮದ್, 2ನೇ ಆರೋಪಿ ಚನ್ನಕೇಶವಲು ಗನ್ ಕಿತ್ತುಕೊಂಡು ಶೂಟ್ ಮಾಡಿದರೆ ಇನ್ನಿಬ್ಬರು ಆರೋಪಿಗಳು ಕಲ್ಲು ತೂರಿ ಪರಾರಿಯಾಗಲು ಯತ್ನಿಸಿದರು. ಈ ವೇಳೆ ಪೊಲೀಸರು ಗುಂಡು ಹಾರಿಸಿದಾಗ ನಾಲ್ವರೂ ಆರೋಪಿಗಳು ಸ್ಥಳದಲ್ಲೇ ಮೃತಪಟ್ಟರೆಂದು ಪೊಲೀಸರು ತಿಳಿಸಿದ್ದಾರೆ.



ಎನ್‌ಕೌಂಟರ್ ಸ್ಥಳದಲ್ಲಿ ಮೃತದೇಹದ ಮಹಜರು ನಡೆಸುತ್ತಿರುವ ತೆಲಂಗಾಣ ಪೊಲೀಸರು.

ನಾನು ಮಲಪ್ರಭೆಯ ನೀರು ಕುಡಿದು ಬೆಳೆದವ. ಹುಬ್ಬಳ್ಳಿ, ರೋಣ ಹಾಗೂ ಹುಟ್ಟೂರು ಅಸೂಟಿ ಜನರ ಪ್ರೀತಿ, ವಿಶ್ವಾಸ, ಸ್ನೇಹದಿಂದ ಬೆಳೆದವ. ನನ್ನಿಂದ ಅನ್ಯಾಯ, ಅಸತ್ಯ ನಡೆಯುವುದಿಲ್ಲ ಎಂಬ ಭರವಸೆ ನೀಡಬಲ್ಲೆ.

| ವಿಶ್ವನಾಥ ಸಜ್ಜನರ್
ಸೈಬರಾಬಾದ್ ಪೊಲೀಸ್ ಆಯುಕ್ತ

### ಎನ್‌ಕೌಂಟರ್ ತನಿಖೆ ಹಾದಿ

- ತೆಲಂಗಾಣದ ಉನ್ನತ ತನಿಖಾ ಸಂಸ್ಥೆ ಎನ್‌ಕೌಂಟರ್ ತನಿಖೆ ನಡೆಸಲಿದೆ, ಎನ್‌ಕೌಂಟರ್ ಅಸಲಿಯೋ ಅಥವಾ ನಕಲಿಯೋ ಎಂಬುದರ ಬಗ್ಗೆ ಐಪಿಎಸ್ ದರ್ಜೆ ಅಧಿಕಾರಿ ತನಿಖೆ ನಡೆಸಿ ಮ್ಯಾಜಿಸ್ಟ್ರೇಟ್‌ಗೆ ವರದಿ ಸಲ್ಲಿಸಬೇಕು.
- ನಕಲಿ ಎಂಬುದಕ್ಕೆ ಸಾಕ್ಷ್ಯ ಲಭ್ಯವಾದರೆ ತಪ್ಪಿತಸ್ಥರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲು ಶಿಫಾರಸು ಮಾಡಬಹುದು.

### ಸತ್ತವರು

ಮೊಹ್ಮದ್(26)
ಚನ್ನಕೇಶವಲು(20)
ಜೊಲ್ಲು ಶಿವ (20)
ಜೊಲ್ಲು ನವೀನ್(20)

### ಎಲ್ಲಿ ಘಟನೆ

- ಹೈದರಾಬಾದ್ ಹೊರವಲಯದ ಚೌಟನ್‌ಪಲ್ಲಿ
- ಎಷ್ಟೊತ್ತಿಗೆ: ಮುಂಜಾನೆ 5.45ರಿಂದ 6.15



### ಅನುಮಾನಗಳೇನು?

- ಎಲ್ಲ ಆರೋಪಿಗಳ ದೇಹದ ಒಂದೇ ಸ್ಥಳದಲ್ಲಿ ಗುಂಡು ಹಾರಿಸಲಾಗಿದೆ ಎಂಬ ಮಾಹಿತಿ
- ಪ್ರಕರಣ ಗಂಭೀರವಾಗಿದ್ದರೂ ಸ್ಥಳ ಮಹಜರಿಗೆ 10 ಪೊಲೀಸರನ್ನು ಮಾತ್ರ ಕರೆದೊಯ್ದಿದ್ದು ಏಕೆ?
- ಆರೋಪಿಗಳಿಗೆ ಕೈಕೋಳ ಹಾಕಿದ್ದರೂ ಪೊಲೀಸರ ಬಂದೂಕು ಕಸಿಯಲು ಸಾಧ್ಯವಾಗಿದ್ದು ಹೇಗೆ?
- ಮೊದಲು ಬೆಳಗ್ಗೆ 3.30ಕ್ಕೆ ಎನ್‌ಕೌಂಟರ್ ನಡೆದಿದೆ ಎಂದ ಪೊಲೀಸರು ಬಳಿಕ 6 ಗಂಟೆಗೆ ಎಂದಿದ್ದೇಕೆ?

### 9ರವರೆಗೆ ಅಂತ್ಯಸಂಸ್ಕಾರವಿಲ್ಲ

ನ್ಯಾಯಾಂಗ ತನಿಖೆ ಕೋರಿಕೆ ಅರ್ಜಿ ಸಂಬಂಧ ತೆಲಂಗಾಣ ಹೈಕೋರ್ಟ್ ಮೃತ ದೇಹಗಳನ್ನು ಡಿ.9ರರವರೆಗೆ ಸಂರಕ್ಷಿಸಿಡುವಂತೆ ಸೂಚಿಸಿದೆ.

### ಪಾತಕ ಹೆಜ್ಜೆ...

ನ-27: ಹೈದರಾಬಾದ್ ಹೊರವಲಯದ ಟೋಲ್‌ಪ್ಲಾಜಾ ಬಳಿ ಪಶುವೈದ್ಯೆಯನ್ನು ಬಾಯ್ಮುಚ್ಚಿ ಕರೆದೊಯ್ದು ಸಾಮೂಹಿಕ ಅತ್ಯಾಚಾರ, ಬಳಿಕ ಪೆಟ್ರೋಲ್ ಹಾಕಿ ಸುಟ್ಟು ಕೊಂದ ದುಷ್ಕರ್ಮಿಗಳ ತಂಡ

ನ.28: ಶಾರದಾನಗರ ಬಳಿ ಸುಟ್ಟಸ್ಥಿತಿಯಲ್ಲಿದ್ದ ಮೃತದೇಹ ಪತ್ತೆ, ಪಶುವೈದ್ಯೆ ಶವ ಎಂಬುದು ಸಾಬೀತು

ನ.29: ಇಬ್ಬರು ಟ್ರಕ್ ಚಾಲಕರು, ಕ್ಲೀನರ್‌ಗಳ ಬಂಧನ, ಕೃತ್ಯದ ತಪ್ಪೊಪ್ಪಿಕೊಂಡ ಆರೋಪಿಗಳು

ನ.30: ಕೋರ್ಟ್ ಮುಂದೆ ಹಾಜರು, ಎಲ್ಲ ಆರೋಪಿಗಳಿಗೂ 14 ದಿನ ನ್ಯಾಯಾಂಗ ಬಂಧನ, ಚಂಚಲಗೂಡ ಕಾರಾಗೃಹಕ್ಕೆ ಸ್ಥಳಾಂತರ

ಡಿ.1: ತ್ವರಿತಗತಿ ನ್ಯಾಯಾಲಯ ಸ್ಥಾಪನೆ ನಿರ್ಧಾರ ಪ್ರಕಟಿಸಿದ ತೆಲಂಗಾಣ ಸರ್ಕಾರ

ಡಿ.6: ಚೌಟನ್‌ಪಲ್ಲಿ ಬಳಿ ನಾಲ್ವರೂ ಆರೋಪಿಗಳ ಎನ್‌ಕೌಂಟರ್